# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 37 ಪ್ರಾ.ಸಾ. : 38**

ಸಾಕ್ಷಿಯ ಹೆಸರು : ಗುರುದಾಸ್ ಕುಡ್ತಾಲ್ಕರ್
ತಂದೆಯ ಹೆಸರು : ಗಜಾನನ ಕುಡ್ತಾಲ್ಕರ್
ವಯಸ್ಸು : 59 ವರ್ಷ
ಕೆಲಸ : ಅಕ್ಕಸಾಲಿಗ
ವಾಸ : ಸೋನಾರವಾಡ, ಕಾರವಾರ

**ದಿನಾಂಕಃ 15.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ನಾವು ಹಾಗೂ ನಮ್ಮ ಕುಟುಂಬದವರು ನಮ್ಮ ಅಜ್ಜನ ಕಾಲದಿಂದಲೂ ಬಂಗಾರದ ಕೆಲಸ ಮಾಡುತ್ತಾ ಬಂದಿರುತ್ತೇವೆ. ದಿನಾಂಕ 01.01.2019 ರಂದು ಕಾರವಾರ ನಗರ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಅದರಂತೆ ನಾನು ಠಾಣೆಗೆ ಹೋದಾಗ ಅಲ್ಲಿ ನನಗೆ ಬಿಳಿ ಬಟ್ಟೆಯಲ್ಲಿದ್ದ ಒಂದು ಬಂಗಾರದ ಚೈನನ್ನು ತೂಕ ಮಾಡಲು ಹೇಳಿದಾಗ ನಾನು ನನ್ನ ಜೊತೆಯಲ್ಲಿ ತೆಗೆದುಕೊಂಡು ಹೋಗಿದ್ದ ಬಂಗಾರ ತೂಕ ಮಾಡುವ ಸಲಕರಣೆಯಿಂದ ಅವರು ನೀಡಿದ ಬಂಗಾರದ ಚೈನನ್ನು ತೂಕ ಮಾಡಿದ್ದು, ಸದರಿ ಚೈನು 12 ಗ್ರಾಂ 420 ಮಿಲಿ ತೂಕವಿರುತ್ತದೆ ಹಾಗೂ ಅದನ್ನು ಪರಿಶೀಲಿಸಿದಾಗ ಬಂಗಾರದ ಚೈನು ಆಗಿರುತ್ತದೆ. ಅಲ್ಲಿ ಪೊಲೀಸರು ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಚೈನು ತೂಕ ಮಾಡಿದ ಬಗ್ಗೆ ನನ್ನ ಸಹಿಯನ್ನು ಪಡೆದುಕೊಂಡರು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.91 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ 91(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ತಾನು ಪರೀಶಿಲಿಸಿದ ಬಂಗಾರದ ಚೈನನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು 4 ಎಂದು ಗುರುತಿಸಲಾಗಿದ್ದು, ಅದನ್ನು ಪ್ಯಾಕ್ ಮಾಡಿದ ಕವರನ್ನು ಮುದ್ದೆ ಮಾಲು 4/1 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು 4/1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿತರ ಪರ ಶ್ರೀ.ಎ.ಎ.ಎ., ವಕೀಲರಿಂದ**

1 ನೇ ಆರೋಪಿತನ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ.ಎಲ್.ಎಸ್.ಕೆ., ವಕೀಲರಿಂದ**

2. 2019 ರಲ್ಲಿ ನಮ್ಮದು ಬಂಗಾರದ ಅಂಗಡಿ ಇತ್ತು. ನಮ್ಮ ಅಂಗಡಿಯ ಹೆಸರು ಶಾಂತ ದುರ್ಗ ಚಾಮುಂಡೇಶ್ವರಿ ಜುವೆಲ್ಲರ್ಸ್ ಎಂದು ಇರುತ್ತದೆ. 2019 ರಲ್ಲಿ ನಮ್ಮ ಅಂಗಡಿಯು ಕಾರವಾರದ ದಿಲೀಪ್ ಕಾಂಪ್ಲೆಕ್ಸನಲ್ಲಿ ಇತ್ತು. ನಮ್ಮ ಬಂಗಾರದ ಅಂಗಡಿಗೆ ಸಂಬಂಧಿಸಿದಂತೆ ಪೊಲೀಸರು ಯಾವುದೇ ದಾಖಲೆಯನ್ನು ಪಡೆದುಕೊಂಡಿಲ್ಲ. ಪೊಲೀಸರು ನನಗೆ ಠಾಣೆಗೆ ಬರುವಂತೆ ಫೋನ್ ಮೂಲಕ ತಿಳಿಸಿದ್ದರು. ನಮ್ಮ ಅಂಗಡಿಯ ಪಕ್ಕದಲ್ಲಿ ಇತರೆ ಬಂಗಾರದ ಅಂಗಡಿಯು ಸಹ ಇರುತ್ತದೆ. ಕಾರವಾರ ನಗರ ಪೊಲೀಸ್ ಠಾಣೆಯ ಸಿಬ್ಬಂದಿಯಾದ ಮಂಜುನಾಥರವರು ನನಗೆ ಕರೆದಿರುತ್ತಾರೆ ಹಾಗೂ ಮಂಜುನಾಥರವರು ನನಗೆ ಪರಿಚಯ ಇರುತ್ತಾರೆ. ನಾನು ಕಾರವಾರ ನಗರ ಪೊಲೀಸ್ ಠಾಣೆಗೆ ಆ ದಿನ ಮಧ್ಯಾಹ್ನ ಊಟ ಮಾಡುವ ಮೊದಲು ಹೋಗಿರುತ್ತೇನೆ. ಬಂಗಾರದ ಚೈನನ್ನು ನನಗೆ ಠಾಣೆಯ ಪಿ.ಎಸ್.ಐ ರವರು ತೋರಿಸಿರುತ್ತಾರೆ. ಬಂಗಾರದ ಚೈನನ್ನು ಪೊಲೀಸರಿಗೆ ಯಾರು ನೀಡಿದರು ಎಂದು ನನಗೆ ಗೊತ್ತಿಲ್ಲ. ಸದರಿ ಬಂಗಾರದ ಚೈನು ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಇದ್ದ ಎರಡು ಜನರ ಹೆಸರು ಹೇಳಲು ನನಗೆ ಬರುವುದಿಲ್ಲ.ಆ ದಿನ ಠಾಣೆಯಲ್ಲಿ ನಾನು, ಪಂಚರಾದ ಎರಡು ಜನ ಮತ್ತು ಪೊಲೀಸರನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಠಾಣೆಗೆ ಹೋದಾಗ ನಾನು ನನ್ನೊಂದಿಗೆ ಬಂಗಾರವನ್ನು ತೂಕ ಮಾಡುವ ಅಳತೆ ಯಂತ್ರವನ್ನು ತೆಗೆದುಕೊಂಡು ಹೋಗಿರುತ್ತೇನೆ. ಅದನ್ನು ಬಿಟ್ಟು ಬೇರೆ ಏನನ್ನೂ ತೆಗೆದುಕೊಂಡು ಹೋಗಿರುವುದಿಲ್ಲ. ಸಾದಾ ಕಣ್ಣಿನಿಂದ ಬಂಗಾರವನ್ನು ನೋಡಿ ಹೇಳಿರುತ್ತೇನೆ. ಆದರೆ ಅದಕ್ಕೆ ಯಾವುದೇ ಪರೀಕ್ಷೆ ಮಾಡಿ ನೋಡಿರುವುದಿಲ್ಲ. ಬಂಗಾರವನ್ನು ಪರೀಕ್ಷೆ ಮಾಡದೇ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಚೈನಿನ ಮೇಲೆ ಬರೆದಿರುವುದನ್ನು ನೋಡಿ ಹಾಗೂ ನನ್ನ ಅನುಭವದ ಮೇಲೆ ಸದರಿ ಚೈನು ಬಂಗಾರದ ಚೈನು ಆಗಿರುತ್ತದೆ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

3. ನಮ್ಮ ಅಂಗಡಿಯಲ್ಲಿ ತಯಾರಾಗುವ ಆಭರಣಗಳಿಗೆ ನಾವು ವಿಶೇಷವಾದ ಗುರುತನ್ನು ಮಾಡುತ್ತೇವೆ. ಮುದ್ದೆ ಮಾಲು 4 ಬಂಗಾರದ ಚೈನಿನ ಮೇಲೆ ಇರುವ ವಿಶೇಷವಾದ ಗುರುತನ್ನು

ನೋಡಿ ಅದು ಯಾವ ಅಂಗಡಿಗೆ ಸೇರಿದ್ದು ಎಂದು ಹೇಳಲು ಬರುವುದಿಲ್ಲ ಆದರೆ ಅದು ಬಂಗಾರವಾಗಿದೆ ಅಥವಾ ಇಲ್ಲವೊ ಎಂದು ಹೇಳಬಹುದು ಎಂದು ನುಡಿಯುತ್ತಾರೆ. ನಕಲಿ ಬಂಗಾರದ ಮೇಲೆಯೂ ಸಹ ಗುರುತುಗಳನ್ನು ಹಾಕಬಹುದು ಎಂದರೆ ಸರಿ. ನಾನು ಆ ದಿನ ಠಾಣೆಗೆ ಹೋದಾಗ ಸುಮಾರು 10 ರಿಂದ 15 ನಿಮಿಷಗಳ ಕಾಲ ಠಾಣೆಯಲ್ಲಿ ಇದ್ದೆನು. ನಿ.ಪಿ. 91 ಪಂಚನಾಮೆಯನ್ನು ನಾನು ಬಂಗಾರ ತೂಕ ಮಾಡಿದ ನಂತರವೇ ಟೈಪ್ ಮಾಡಿರುತ್ತಾರೆ. ನಿ.ಪಿ.91 ಪಂಚನಾಮೆಗೆ ಯಾರು ಮಾಹಿತಿ ನೀಡಿದರು ಎಂದರೆ ಸಾಕ್ಷಿಯು ನಾನು ಕುಳಿತುಕೊಂಡಿದ್ದೆ ಆದರೆ ಮಾಹಿತಿ ಯಾರು ನೀಡಿದರು ಎಂದು ನನಗೆ ಗೊತ್ತಿಲ್ಲ. ಮುದ್ದೆ ಮಾಲು 4/1(ಎ) ಸಹಿಯನ್ನು ಯಾವಾಗ ಮಾಡಿದ್ದೀರಿ ಎಂದರೆ ಸಾಕ್ಷಿಯು ತೂಕ ಮಾಡಿದ ನಂತರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಬಂಗಾರವನ್ನು ತೂಕ ಮಾಡದೇ ಇದ್ದರೂ ಸಹ ಮಂಜುನಾಥ ಎಂಬ ಪೊಲೀಸ್ ಸಿಬ್ಬಂದಿ ನನಗೆ ಪರಿಚಯ ಇರುವ ಕಾರಣ ಅವರು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿತನ ಪರ ಶ್ರೀ.ಎನ್.ವಿ.ಎನ್., ವಕೀಲರಿಂದ**

4 ನೇ ಆರೋಪಿತನ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿತನ ಪರ ಶ್ರೀ.ಹೆಚ್.ಎಸ್.ಎಸ್., ವಕೀಲರಿಂದ**

5 ನೇ ಆರೋಪಿತನ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ